# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ ಬೆಂಗಳೂರು–1.

ಸಂಖ್ಯೆ:ಸಿ4(2) ಪ್ರೌ.ಶಿ.ಜೇ.ಪಟ್ಟಿ/2010–11 ದಿನಾಂಕ: 17–02–2011

## ಸುತ್ತೋಲೆ

ವಿಷಯ: ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರು ಗ್ರೇಡ್–2, ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–1, ಚಿತ್ರಕಲಾ ಶಿಕ್ಷಕರು, ಸಂಗೀತ, ನೃತ್ಯ, ನಾಟಕ ಶಿಕ್ಷಕರು ಗ್ರೇಡ್–2, ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್–2, ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್–1, ಇವರ ನೇಮಕಾತಿ ಪ್ರಾಧಿಕಾರಿಯಾದ ಉಪನಿರ್ದೇಶಕರ ಹಂತದಲ್ಲಿ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ: DPAR 59 SRE 2002 DATED:24-06-2003

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರೌಢಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳ ಉಲ್ಲೇಖಿತ ಸರ್ಕಾರದ ಅಧಿಸೂಚನೆಯನ್ವಯ ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರ **ನೇಮಕಾತಿ ಪ್ರಾಧಿಕಾರ** ಜಿಲ್ಲಾ ಉಪನಿರ್ದೇಶಕರಾಗಿರುವುದರಿಂದ, ಜಿಲ್ಲೆಯಲ್ಲಿ ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರು ಗ್ರೇಡ್–2, ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–1, ಚಿತ್ರಕಲಾ ಶಿಕ್ಷಕರು, ಸಂಗೀತ, ನೃತ್ಯ, ನಾಟಕ ಶಿಕ್ಷಕರು ಗ್ರೇಡ್–2, ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್–2, ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್–1, ವೃಂದದಡಿಯಲ್ಲಿ ನೇಮಕಗೊಂಡು (ಬಡ್ತಿ ಸೇರಿದಂತೆ) ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು **"ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು–1957 ರ ನಿಯಮ–10"** ರಂತೆ ಸಿದ್ಧಪಡಿಸಿ ಪ್ರಕಟಿಸುವ ಜವಾಬ್ದಾರಿ ನಿಮ್ಮದಾಗಿದೆ.

ಆದುದರಿಂದ, ಪ್ರೌಢಶಾಲಾ ಸಹಶಿಕ್ಷಕರು ಗ್ರೇಡ್–2, ಸಂಗೀತ, ನೃತ್ಯ, ನಾಟಕ ಶಿಕ್ಷಕರು ಗ್ರೇಡ್–2, ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–1, ಚಿತ್ರಕಲಾ ಶಿಕ್ಷಕರು, ಸಂಗೀತ, ನೃತ್ಯ, ನಾಟಕ ಶಿಕ್ಷಕರು ಗ್ರೇಡ್–2, ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್–2, ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್–1,ವೃಂದದ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ (ಸಹಶಿಕ್ಷಕರು/ಬಿಆರ್‌ಪಿ/ಶಿಕ್ಷಣ ಸಂಯೋಜಕರು/ಪದವೀಧರ ಮುಖ್ಯಶಿಕ್ಷಕರು/ತಾಂತ್ರಿಕ/ಶೈಕ್ಷಣಿಕ ಸಹಾಯಕರು) ಶಿಕ್ಷಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು **"ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು–1957 ರ ನಿಯಮ–10"** ರಂತೆ **ಅನುಬಂಧದಲ್ಲಿ** ಸೂಚಿಸಿರುವಂತೆ ಸಿದ್ಧಪಡಿಸಿ **ದಿನಾಂಕ: 20.02.2011 ರೊಳಗಾಗಿ** ಪ್ರಕಟಿಸುವಂತೆ ಸೂಚಿಸಿದೆ.

ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಒಂದು ತಿಂಗಳ ಕಾಲಾವಕಾಶ ನೀಡಿ, ಬಾಧಿತ ಶಿಕ್ಷಕರಿಂದ ಆಕ್ಷೇಪಣೆಗಳನ್ನು ಪಡೆದು ಕ್ರೋಢೀಕರಿಸಿ ಅಂತಿಮ ಜೇಷ್ಠತಾ ಪಟ್ಟಿಯನ್ನು **ದಿನಾಂಕ: 30.03.2011 ರೊಳಗಾಗಿ** WWW.schooleducation.kar.nic.in ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ನಿಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ.

ನೀವು ಸಿದ್ಧಪಡಿಸಿದ ಅಂತಿಮ ಜೇಷ್ಠತಾ ಪಟ್ಟಿಗಳ ಆಧಾರದ ಮೇಲೆ ಬೆಂಗಳೂರು ಆಯುಕ್ತಾಲಯದ ವ್ಯಾಪ್ತಿಯ ಸಂಯುಕ್ತೀಕರಿಸಿದ ಜೇಷ್ಠತಾ ಪಟ್ಟಿ **"ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು–1957 ರ ನಿಯಮ–7(ಎ)"** ರ ಪ್ರಕಾರ ಸಿದ್ಧಪಡಿಸಬೇಕಾಗಿರುವುದರಿಂದ ಸದರಿ ಜೇಷ್ಠತಾ ಪಟ್ಟಿಗಳ **ಸಾಫ್ಟ್ ಮತ್ತು ಹಾರ್ಡ್** ಕಾಪಿಯನ್ನು **ದಿನಾಂಕ: 30.03.2011 ರೊಳಗಾಗಿ** ಈ ಕಛೇರಿಗೆ ತಪ್ಪದೇ ಸಲ್ಲಿಸಲು ತಿಳಿಸಿದೆ..

ಈ ಕಾರ್ಯವನ್ನು ಆದ್ಯತೆ ಮೇರೆಗೆ ಪರಿಗಣಿಸಿ ಕ್ರಮ ಕೈಗೊಂಡು ಈ ಕಛೇರಿಗೆ ಸಕಾಲದಲ್ಲಿ ವರದಿ ಸಲ್ಲಿಸಲು ಸೂಚಿಸಿದೆ.

(ಕೆ.ಪಿ.ಹನುಮಂತರಾಯಪ್ಪ)
ನಿರ್ದೇಶಕರು (ಪ್ರೌಢಶಿಕ್ಷಣ)

\\Typing3server\d\E\EST4\Seniority.17.01.11.doc

ಆಯುಕ್ತರ ಕಛೇರಿ ಬೆಂಗಳೂರು ಇಲ್ಲಿ ಪ್ರೌಢಶಾಲಾ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ಕೆಳಕಂಡ ದಿನಾಂಕದವರೆಗೆ ಪರಿಗಣಿಸಿ ಸಿದ್ಧಪಡಿಸಲಾಗಿದೆ.

1. ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರು ಗ್ರೇಡ್-2 – 31.12.2007
2. ಸರ್ಕಾರಿ ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 – 31.12.2007
3. ಸರ್ಕಾರಿ ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರು – 31.12.2008
4. ಸರ್ಕಾರಿ ಪ್ರೌಢಶಾಲಾ ಸಂಗೀತ, ನೃತ್ಯ, ನಾಟಕ ಶಿಕ್ಷಕರು ಗ್ರೇಡ್-2 – 31.12.2008
5. ಸರ್ಕಾರಿ ಪ್ರೌಢಶಾಲಾ ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್--2 – 31.12.1996
6. ಸರ್ಕಾರಿ ಪ್ರೌಢಶಾಲಾ ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್-1 – 31.12.1996

ಉಪನಿರ್ದೇಶಕರು ಈ ಕೆಳಗೆ ನಮೂದಿಸಿರುವ ಅವಧಿಗೆ ನೇರ ನೇಮಕಾತಿ/ಬಡ್ತಿ ಹೊಂದಿದ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿ ದಿನಾಂಕ:01-01-2010ರಲ್ಲಿದಂತೆ ಪ್ರಕಟಿಸಲು ತಿಳಿಸಿದೆ.

1. ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರು ಗ್ರೇಡ್-2 – 01.01.2008 ರಿಂದ 31.12.2010
2. ಸರ್ಕಾರಿ ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 – 01.01.2008 ರಿಂದ 31.12.2010.

ಸರ್ಕಾರಿ ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರು 01.01.2009 ರಿಂದ 31.12.2010.

4. ಸರ್ಕಾರಿ ಪ್ರೌಢಶಾಲಾ ಸಂಗೀತ, ನೃತ್ಯ, ನಾಟಕ ಶಿಕ್ಷಕರು ಗ್ರೇಡ್-2 –01.01.2009 ರಿಂದ 31.12.2010
5. ಸರ್ಕಾರಿ ಪ್ರೌಢಶಾಲಾ ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್-2 – 01.01.1997 ರಿಂದ 31.12.2010
6. ಸರ್ಕಾರಿ ಪ್ರೌಢಶಾಲಾ ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್-1 01.01.1997 ರಿಂದ 31.12.2010

20.02.4

(ಕೆ.ಪಿ.ಹನುಮಂತರಾಯಪ್ಪ)
ನಿರ್ದೇಶಕರು (ಪ್ರೌಢಶಿಕ್ಷಣ)

ಗೆ:

1. ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮುಂದಿನ ಕ್ರಮಕ್ಕಾಗಿ
1. ವಿಭಾಗೀಯ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಮತ್ತು ಮೈಸೂರು ಬೆಳಗಾವಿ ಮತ್ತು ಗುಲಬರ್ಗಾ ವಿಭಾಗ ಇವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಕಛೇರಿ ಪ್ರತಿ

\\Typing3server\d\E\EST4\Seniority.17.01.11.doc

## ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ ಬೆಂಗಳೂರು-1.

ಸಂಖ್ಯೆ:ಸಿ4(2) ಪ್ರೌ.ಶಿ.ಜೇ.ಪಟ್ಟಿ/2010-11 ದಿನಾಂಕ: 17-02-2011

**ಸುತ್ತೋಲೆ**

ವಿಷಯ: ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರು ಗ್ರೇಡ್-2, ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1, ಚಿತ್ರಕಲಾ ಶಿಕ್ಷಕರು, ಸಂಗೀತ, ನೃತ್ಯ, ನಾಟಕ ಶಿಕ್ಷಕರು ಗ್ರೇಡ್-2, ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್-2, ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್-1, ಈಗಾಗಲೇ ಪ್ರಕಟಿಸಿರುವ ಜೇಷ್ಠತಾ ಪಟ್ಟಿಯಲ್ಲಿ ಬಿಟ್ಟು ಹೋಗಿರುವ ಶಿಕ್ಷಕರ ಸೇವಾ ಮಾಹಿತಿಯನ್ನು ಸಂಬಂಧಪಟ್ಟ ಉಪನಿರ್ದೇಶಕರ ಮುಖಾಂತರ ಸಲ್ಲಿಸುವ ಬಗ್ಗೆ

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರೌಢಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳ ಅಧಿಸೂಚನೆಯನ್ವಯ ಸೇವೆ ಸಲ್ಲಿಸುತ್ತಿರುವ ಈ ಕೆಳಕಂಡ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು **"ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು-1957 ರ ನಿಯಮ-10"** ರಂತೆ ಸಿದ್ಧಪಡಿಸಿ ಆಯುಕ್ತರ ಕಛೇರಿ ಬೆಂಗಳೂರು ಇಲ್ಲಿ ಜೇಷ್ಠತಾ ಪಟ್ಟಿಯನ್ನು ಕೆಳಕಂಡ ದಿನಾಂಕದವರೆಗೆ ಪರಿಗಣಿಸಿ ಸಿದ್ಧಪಡಿಸಲಾಗಿದೆ.

1. ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರು ಗ್ರೇಡ್-2 - 31.12.2007
2. ಸರ್ಕಾರಿ ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 - 31.12.2007
3. ಸರ್ಕಾರಿ ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರು - 31.12.2008
4. ಸರ್ಕಾರಿ ಪ್ರೌಢಶಾಲಾ ಸಂಗೀತ, ನೃತ್ಯ, ನಾಟಕ ಶಿಕ್ಷಕರು ಗ್ರೇಡ್-2 - 31.12.2008
5. ಸರ್ಕಾರಿ ಪ್ರೌಢಶಾಲಾ ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್-2 - 31.12.1996
6. ಸರ್ಕಾರಿ ಪ್ರೌಢಶಾಲಾ ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್-1 - 31.12.1996

ಅ) ಈ ಜೇಷ್ಠತಾ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗದೆ ಉಪ ಜೇಷ್ಠತಾ ಸಂಖ್ಯೆ ಪಡೆದಿರುವವರು ಸಹಾ ಮತ್ತೊಮ್ಮೆ ಉಪ ಜೇಷ್ಠತಾ ಸಂಖ್ಯೆಗೆ ಅರ್ಜಿ ಸಲ್ಲಿಸಬೇಕು.

ಆ) ಮೇಲ್ಕಂಡ ದಿನಾಂಕಗಳ ಜೇಷ್ಠತಾ ಪಟ್ಟಿಗಳಲ್ಲಿ ನಿಮ್ಮ ಜೇಷ್ಠತಾ ಸಂಖ್ಯೆ ಬಿಟ್ಟುಹೋಗಿದ್ದಲ್ಲಿ ಅಂತಹ ಬಾಧಿತ ಶಿಕ್ಷಕರು ಈ ಸುತ್ತೋಲೆ ಪ್ರಕಟಿಸಿದ ದಿನಾಂಕದಿಂದ 45 ದಿನಗಳ ಕಾಲಾವಕಾಶದೊಳಗಾಗಿ ಸಂಬಂದಪಟ್ಟ ಉಪನಿರ್ದೇಶಕರಿಗೆ ಸೇವಾ ಮಾಹಿತಿ ಸಲ್ಲಿಸಬೇಕು. 45 ದಿನಗಳ ನಂತರ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

ಇ) ಆಕ್ಷೇಪಣಾ ಅರ್ಜಿಗಳನ್ನು ಸಂಬಂಧಿಸಿದ ಉಪನಿರ್ದೇಶಕರಿಗೆ ಸಲ್ಲಿಸಬೇಕೇ ವಿನ: ಯಾವುದೇ ಕಾರಣಕ್ಕೂ ಆಯುಕ್ತರ ಕಛೇರಿಗೆ ನೇರವಾಗಿ ಸಲ್ಲಿಸಬಾರದಾಗಿ ಭಾದಿತ ಶಿಕ್ಷಕರಿಗೆ ತಿಳಿಸಿದೆ.

ಇದನ್ನು ಅಂತಿಮ ಉಪ ಜೇಷ್ಠತಾ ಸಂಖ್ಯೆಯ ಪಟ್ಟಿ ಎಂದು ಭಾವಿಸುವುದು.

26-2-11

(ಕೆ.ಪಿ.ಹನುಮಂತರಾಯಪ್ಪ)
ನಿರ್ದೇಶಕರು (ಪ್ರೌಢಶಿಕ್ಷಣ)

\\Typing3server\d\E\EST4\Seniority.17.01.11.doc